ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3858-2023

ಸಿ.ಡಬ್ಲ್ಯೂ -03
ಪಿ.ಡಬ್ಲ್ಯೂ-03

ಸಾಕ್ಷಿದಾರನ ಹೆಸರು :- ವೇಣುಗೋಪಾಲ
ತಂದೆಯ ಹೆಸರು :- ಬಸವರಾಜು
ವಯಸ್ಸು :- 38 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಅರ್ಜುನಹಳ್ಳಿ

**ಸಾಕ್ಷಿಗೆ ದಿಃ 12.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿ ನನಗೆ ಗೊತ್ತು. ಚಾಸಾ 1 ಮತ್ತು 2 ಗೊತ್ತು. ದಿಃ 25.05.2022 ರಂದು ಬೆಳಿಗ್ಗೆ 9 ರಿಂದ 9.30ರ ಸಮಯದಲ್ಲಿ ಅರ್ಜುನಹಳ್ಳಿಯಲ್ಲಿರುವ ಮನೆಯ ಹತ್ತಿರ ಚಾಸಾ 1 ಅವರು ನೆಂಟರು ಬಂದಿದ್ದು ಅವರ ಕಾರು ಆರೋಪಿ 1 ಅವರ ಮನೆಯ ಮುಂದಿನ ಚಪ್ಪಡಿಯ ಮೇಲೆ ಹಾದು ಹೋಗಿದ್ದು ಚಾಸಾ 1 ಅವರು ಮನೆಯ ಹತ್ತಿರ ಇದ್ದಾಗ ಆರೋಪಿತರು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಚಾಸಾ 1 ಅವರು ಒಳಗೆ ಹೋಗಿದ್ದು ಆರೋಪಿತರು ಅಲ್ಲಿಗೆ ಹೋಗಿ ದೊಣ್ಣೆಯಿಂದ ಚಾಸಾ 1 ಅವರಿಗೆ ಹೊಡೆದಿರುತ್ತಾರೆ.

ನಾನು ಮತ್ತು ಚಾಸಾ 2 ಅವರು ಜಗಳ ಬಿಡಿಸಿರುತ್ತೇವೆ. ನಂತರ ಚಾಸಾ 1 ಅವರನ್ನು ಎಡವಾಣಿ ಸರ್ಕಾರಿ ಆಸ್ಪತ್ರೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಆಗುವುದಿಲ್ಲವೆಂದಿದ್ದಕ್ಕೆ ಚಾಸಾ 1 ಅವರು ಬೆಳಿಗ್ಗೆ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. ನಾನು ಪೋಲಿಸರು ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಮು. ಮಾ. ಅನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 24.05.2022 ರಂದು ಬೆಳಿಗ್ಗೆ 9.30ರ ಸಮಯದಲ್ಲಿ ಗಲಾಟೆ ಆಗಿರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ 1 ಅವರಿಗೆ ಬೋಳಿ ಮುಂಡೆ ಸೋಳೆ ಮುಂಡೆ ಎಂದು ಬೈಯುತ್ತಾ ಚಪ್ಪಡಿ ಕಟ್ಟಿಸಿಕೊಡುಬಾ ಎಂದು ಅವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾಸಾ 2 ಸಹಅವರು ಮನೆಯ ಹತ್ತಿರ ಹೋಗಿರುತ್ತೇವೆ ಎಂದರೆ ಸರಿ. ಆರೋಪಿ 1 ಮತ್ತು 3 ಚಾಸಾ 1 ಅವರ ಮನೆಯ ಬಳಿ ದೊಣ್ಣೆಗಳನ್ನು ತಗೆದುಕೊಂಡು ಅವರ ಮನೆಯಲ್ಲಿ ನುಗ್ಗಿ ದೊಣ್ಣೆಯಿಂದ ಮೈಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 2 ಮತ್ತು 4 ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ಚಾಸಾ 1 ಅವರು ಪೋಲಿಸ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ.

**ಆರೋಪಿತರ ಪರ ಪಾಟೀ ಸವಾಲುಃ T.G.T ವಕೀಲರಿಂದಃ**

ನಾನು ಚಾಸಾ 1 ಅವರ ಸಂಬಂಧಿ ಆಗಿರುತ್ತೇನೆ ಎಂದೆರ ಸರಿಯಲ್ಲ. ಸಾಕ್ಷಿ ಅವರ ಮನೆಯ ಬೀದಿಯಲ್ಲಿ ನಮ್ಮ ಮನೆ ಇದೆ ಎಂದು ಹೇಳುತ್ತಾರೆ. ನಮ್ಮ ಮನೆಗೂ ಚಾಸಾ 1 ಅವರ ಮನೆಗೂ 100 ಅಡಿ ಅಂತರ ಇದೆ. ಆರೋಪಿತರು ಮನೆ ಮತ್ತು ನಮ್ಮ ಮನೆ ಅಕ್ಕಪಕ್ಕದಲ್ಲಿದೆ. ಆರೋಪಿತರ ಮನೆಯಿಂದ 3-4 ಮನೆಗಳು ಆದ ಬಳಿಕ ಚಾಸಾ 1 ಅವರ ಮನೆ ಬರುತ್ತದೆ. ಗಲಾಟೆ ಆಗಿದೆ ಎಂದು ಹೇಳುವ ವಾಹನ ಚಾಸಾ 1 ಅವರ ಮನೆಯ ಕಡೆಯಿಂದ ಬಂದಿರುತ್ತದೆ. ನಮ್ಮ ಮನೆಯ ಮುಂದಿನ ರಸ್ತೆ ಅಂದಾಜು 6 ರಿಂದ 7 ಅಡಿ ಇರಬಹುದೆಂದು ಹೇಳುತ್ತಾರೆ.

ಗಲಾಟೆ ಆಗಿದೆ ಎಂದು ಹೇಳುವ ಸಮಯದಲ್ಲಿ 4-5 ಜನ ಇದ್ದರು. ಸದರಿ 4-5 ಜನ ಅಂದರೆ ನನ್ನ ಅಕ್ಕ, ಚಾಸಾ 2, ನನ್ನ ತಾಯಿ ಮತ್ತು ಚಾಸಾ 2 ಅವರ ತಾಯಿ ಇದ್ದರು ಎಂದು

ಹೇಳುತ್ತಾರೆ. ಚಾಸಾ 2 ಅವರ ಮನೆ ನಮ್ಮ ಮನೆಯಿಂದ ಎರಡು ಮನೆ ದಾಟಿದ ನಂತರ ಅವರ ಮನೆ ದಕ್ಷಿಣಕ್ಕೆ ಬರುತ್ತದೆ. ಆರೋಪಿತರು ಕಾರನಲ್ಲಿದ್ದವರನ್ನು ಸಹ ಈ ಬಗ್ಗೆ ಪ್ರಶ್ನೆ ಮಾಡಿರುತ್ತಾರೆ. ಸ್ಥಳದಲ್ಲಿ ಚಪ್ಪಡಿ ಹೊಡೆದು ಹೊಗಿರಲಿಲ್ಲ. ಆರೋಪಿತರ ಮನೆ ಹತ್ತಿರ ಕಾರು ಚಪ್ಪಡಿ ಕಲ್ಲಿನ ಮೇಲೆ ಹತ್ತಿದೆ ಎಂದು ಹೇಳುವ ಸಮಯದಲ್ಲಿ ಆರೋಪಿತರು ಮನೆಯಲ್ಲಿ ಆರೋಪಿತರೆಲ್ಲರೂ ಇದ್ದರು.

ಆರೋಪಿ 1 ಮತ್ತು 4 ಅವರು ರಾತ್ರಿ 9 ಗಂಟೆಯ ಸಮಯದಲ್ಲಿ ಚಾಸಾ 1 ಅವರ ಮನೆಯ ಬಳಿ ಮೊದಲು ಹೋಗಿರುತ್ತಾರೆ. ನಾನು 5 ನಿಮಿಷಗಳ ಬಳಿಕ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ 5 ನಿಮಿಷಯಲ್ಲಿ ಏನಾಗಿದೆ ಎಂದು ಗೊತ್ತಿಲ್ಲವೆಂದರೆ ಸಾಕ್ಷಿ ಚಾಸಾ 1 ಅವರು ಮನೆಗೆ ಹೋರಗೆ ಇದ್ದು ಆರೋಪಿತರು ಬೈಯುತ್ತಿದ್ದರು ಎಂದು ಹೇಳುತ್ತಾರೆ. ಚಾಸಾ 1 ಅವರು ಮನೆ ಒಳಗಡೆ ಹೋಗಿದ್ದು ಆಗ ಆರೋಪಿತರು ಸಹ ಹೋಗಿರುತ್ತಾರೆ ನಾನು ಸಹ ಹೋಗಿದ್ದೇ ಎಂದು ಹೇಳುತ್ತಾರೆ. ಗಲಾಟೆ ಆಗಿದೆ ಎನ್ನುವ ಸ್ಥಳಕ್ಕೆ ಹೋಗಿ ಚಾಸಾ 2 ಮತ್ತು ನಾನು ಬಿಡಿಸಿರುತ್ತೇವೆ.

ಆರೋಪಿತರು ಗಲಾಟೆ ಆಗಿದೆ ಎನ್ನುವ ಸಮಯದಲ್ಲಿ ಚಾಸಾ 1 ಅವರು ಮನೆಯ ಹತ್ತಿರ ಇದ್ದ ಬಿದುರು ದೊಣ್ಣೆ ಮತ್ತು ಕೋಲನ್ನು ಆರೋಪಿ1 ಮತ್ತು 4 ತಗೆದುಕೊಂಡು ಹೋಗಿರುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಅಭಿಷೇಕ ಮತ್ತು ವೆಂಕಟರಾಮಯ್ಯ ಅವರು ದೊಣ್ಣೆ ತಗೆದುಕೊಂಡು ಹೋಗಿರುವಾಗಿ ಹೇಳಿರುತ್ತೀರಿ ಎಂದರೆ ಸಾಕ್ಷಿ ಹೇಳಿದ್ದೇನೆಂದು ನುಡಿಯುತ್ತಾರೆ. ಚಾಸಾ 1 ಅವರಿಗೆ ಗಲಾಟೆಯಲ್ಲಿ ರಕ್ತ ಆಗಿತ್ತಾ ಎಂದರೆ ಸಾಕ್ಷಿ ಎಡಗೈಗೆ ರಕ್ತ ಗಾಯ ಆಗಿತ್ತು ಎಂದು ಹೇಳುತ್ತಾರೆ.

ನಾನು ಮತ್ತು ಚಾಸಾ 2 ಅವರು ಆಸ್ಪತ್ರೆಗೆ ಬೈಕನಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಆಗಿದೆ ಎನ್ನುವ ಗಲಾಟೆಯ ನಂತರ 9.45 ರಿಂದ 10 ಗಂಟೆಯ ಸಮಯದಲ್ಲಿ ಎಡವಾಣಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ವೈದ್ಯರು ಆಗುವುದಿಲ್ಲವೆಂದು ಹೇಳಿರುತ್ತಾರೆ.

ಸದರಿ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲವೆಂದರೆ ಸರಿಯಲ್ಲ. ಮಾರನೇ ದಿನ ಬೆಳಿಗ್ಗೆ ಆಸ್ಪತ್ರೆ ಹೋಗಿರುತ್ತಾರೆ. ಆಗಿದೆ ಎನ್ನುವ ಗಲಾಟೆಯಲ್ಲಿ ಬಟ್ಟೆ ರಕ್ತ ಕಲೆ ಆಗಿತ್ತು. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲವೆಂದರೆ ಸರಿಯಲ್ಲ. ಹೇಳಿಕೆಯನ್ನು ಪೋಲಿಸರು ಬರೆದುಕೊಂಡಿರುವುದಿಲ್ಲವೆಂದು ಹೇಳುತ್ತಾರೆ. ಸದರಿ ಗಲಾಟೆಯನ್ನು ಬೆಳಿಗ್ಗೆ 9.30 ಕ್ಕೆ ಹೊರತು ಪಡಿಸಿ ನಂತರ ಬೇರೆ ದಿನ ಗಲಾಟೆ ಆಗಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಗಲಾಟೆ ಆಗಿರುವುದಿಲ್ಲ ನಾನು ಚಾಸಾ 1 ಅವರು ನನ್ನ ಸಂಬಂಧಿ ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ.

ಆರೋಪಿತರಿಗೂ ಪ್ರಕರಣಕ್ಕೂ ಮತ್ತು ಮು. ಮಾ. ಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಆರೋಪಿತರಿಗೆ ಚಾಸಾ 1 ಅವರಿಗೆ ತಿಪ್ಪೆ ಹಾಕುವ ಜಮೀನಿನ ಸಂಬಂದ ದ್ವೇಷ ಇದೆ ಎಂದರೆ ಸರಿ. ಸದರಿ ದ್ವೇಷದ ಹಿನ್ನಲೆಯಲ್ಲಿ ಚಾಸಾ 1 ಅವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.